ಉಳಿದ ಹಣ ಖರ್ಚು ಮಾಡದೇ ಇರುವುದಕ್ಕೆ ಕಾರಣ ಏನು ? ಆದಕ್ಕೆ ಅವಕಾಶ ಇರಲಿಲ್ಲವೇ ? ಕೇಂದ್ರದಿಂದ ಹಣ ಮಂಜೂರಾಗಿದ್ದರೂ ಹಣ ಖರ್ಚು ಮಾಡದೇ ಇರುವುದಕ್ಕೆ ರಾಜ್ಯಸರ್ಕಾರಕ್ಕೆ ಇರುವ ಅಡ್ಡಿ ಆತಂಕಗಳೇನು ?

ಶ್ರೀ ಕಾಗೋಡು ತಿಮ್ಮಪ್ಪ.— ೧೯೮೦–೮೧ರಲ್ಲಿ ಪೂರ್ತಿ ಹಣ ಖರ್ಚು ಮಾಡಿದ್ದೇವೆ. ೧೯೮೧–೮೨ಕ್ಕೆ ಏನು ಮಂಜೂರಾತಿ ಸಿಕ್ಕಿದೆ ಅದನ್ನು ಖರ್ಚು ಮಾಡುತ್ತೇವೆ. ಈಗಾಗಲೇ ಕೆಲವು ಕೆಲಸಗಳ ಬಗ್ಗೆ ಟೆಂಡರ್ ಕರೆದಿದ್ದು ಕೆಲವಕ್ಕೆ ಕರೆದಿಲ್ಲ. ಅದನ್ನೂ ಕರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Estimated cost of Kallamballa Bridge

278 SRI S. S. Arakeri (Balloli).—Will the Minister for Public Works be pleased to state.—

(a) the total estimated cost of Kallahalla bridge Halasangi bridge Sirakanahalli bridge Pharasi Bridge at Baradal village in Balloli Constituency;

(b) whether these works are included in the budget for the year 1981–82.

(c) if so, when the words will be taken up.

(d) if not when these construction of bridges works will be included?

SRI KAGODU THIMMAPPA (Minister for Public Works.).—

(a) Total estimated cost is Rs. 70-00 Lakhs.

(b) No.

(c) The works will be taken up subject to availability of funds.

(d) Does not arise in view of reply to clause (c).

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಅಧ್ಯಕ್ಷರೇ, ಅಚ್ಚು ಹಾಕಿಸಿರುವ ಪ್ರಶ್ನೋತ್ತರ ಪಟ್ಟಿಯಲ್ಲಿ ನನ್ನ ಹೆಸರು ತಪ್ಪಾಗಿ ಮುದ್ರಿತವಾಗಿರುವುದಲ್ಲದೆ ನನ್ನ ಮತದಾರ ಕ್ಷೇತ್ರದಲ್ಲಿನ ಬರಡೋಲು ಗ್ರಾಮವನ್ನು ಬರಡಾಲ್ ಎಂದೂ ಸಿರಕನಹಳ್ಳಿಯನ್ನು ಸಿರಕಾನಹಳ್ಳಿ ಎಂದೂ ತಪ್ಪಾಗಿ ಮುದ್ರಿತವಾಗಿದೆ. ಆದುದರಿಂದ, ಇನ್ನು ಮುಂದೆ ಇಂತಹ ತಪ್ಪುಗಳು ಆಗದಂತೆ ಸರಿಯಾಗಿ ಅಚ್ಚಾಗಲು ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಆಗಲಿ.

ಶ್ರೀ ಎಸ್. ಎಸ್. ಅರಕೇರಿ.—ಬಳ್ಳೊಳ್ಳಿ ಚುನಾವಣಾ ಕ್ಷೇತ್ರದ ಕಲ್ಲಹಳ್ಳಿ, ಪಲಸಂಗಿ ಮತ್ತು ಸಿರಕನಹಳ್ಳಿಗಳಲ್ಲಿ ಸೇತುವೆಗಳ ನಿರ್ಮಾಣಕ್ಕೆ ಒಟ್ಟು ಅಂದಾಜು ಪೆಚ್ಚ ೭೦ ಲಕ್ಷ ರೂಪಾಯಿಗಳೆಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿರುವರು. ಆದರೆ, ಪ್ರತಿಯೊಂದು ಸೇತುವೆಗೂ ಬಿಡಿಬಿಡಿಯಾಗಿ ಎಷ್ಟು ಅಂದಾಜು ಎಂಬುದನ್ನು ಅವರು ತಿಳಿಸುವರೆ?

ಶ್ರೀ ಕಾಗೋಡು ತಿಮ್ಮಪ್ಪ,—ಮಾನ್ಯ ಅಧ್ಯಕ್ಷರೇ, ಕಲ್ಲ ಹಳ್ಳಕ್ಕೆ high level Causeway ಕಟ್ಟಿದರೆ ೧೭ ಲಕ್ಷ ರೂಪಾಯಿಗಳಾಗುತ್ತದೆ, Low level causeway ಕಟ್ಟಿದರೆ ೫ ಲಕ್ಷ ರೂಪಾಯಿಗಳಾಗುತ್ತದೆ. ಪಲಸಂಗಿಯಲ್ಲಿ ಹಳ್ಳಕ್ಕೆ high level Causeway ಕಟ್ಟಿದರೆ ೧೯ ಲಕ್ಷ ರೂಪಾಯಿಗಳಾಗುತ್ತದ, low level Submersible causeway ಕಟ್ಟಿದರೆ ೧೦ ಲಕ್ಷ ರೂಪಾಯಿಗಳಾಗು

ತ್ತದೆ ಮತ್ತು low level causeway ಕಟ್ಟಿದರೆ ೧೫ ಲಕ್ಷ ರೂಪಾಯಿಗಳಾಗುತ್ತದೆ, ಸಿರಕನಹಳ್ಳಿಯಲ್ಲಿ low level Causeway ಕಟ್ಟಿದರೆ ೩ ಲಕ್ಷ ರೂಪಾಯಿಗಳಾಗುತ ದೆ. ಬರಡೋಲ ಗ್ರಾಮದಲ್ಲಿ high level submersible causeway ಕಟ್ಟಿದರೆ ೧೦ ಲಕ್ಷ ರೂಪಾಯಿಗಳಾಗುತ ದೆ ಮತ್ತು low level Causeway ಕಟ್ಟಿದರೆ ೩ ಲಕ್ಷ ರೂಪಾಯಿಗಳಾಗುತ ದೆ.

ಶ್ರೀ ಎಸ್. ಎಸ್. ಅರಕೇರಿ.—ಬಹಳ ಪ್ರಾಮುಖ್ಯ ಪಡೆದಿರುವ ಹಲಸಂಗಿ ಮತ್ತು ಕಲ್ಲಹಳ್ಳಿ ಸಿರಕನಹಳ್ಳಿಗಳಲ್ಲಿ ಆದಷ್ಟು ಬೇಗ high level causeway ಕಟ್ಟಿದರೆ ನಾನು ಮಾನ್ಯ ಸಚಿವರಿಗೆ ತುಂಬಾ ಆಭಾರಿಯಾಗಿರುತ್ತೇನೆ. ಮತ್ತು ಹಲಸಂಗಿಯಲ್ಲಿ ಬ್ಯಾರೇಜ್ ಕಟ್ಟಿದರೆ ರೈತರಿಗೆ ಅನುಕೂಲವಾಗುತ್ತದೆಯೇ ಅಥವಾ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಯೇ ಎಂಬುದನ್ನು ತಾವು ವಿಚಾರ ಮಾಡಿ ನನ್ನ ಮತದಾರರ ಕ್ಷೇತ್ರಕ್ಕೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—High level causeway ಕಟ್ಟಿದರೆ ಶಾಶ್ವತವಾಗಿರುತ್ತದೆ ಆದರೆ ಹಣ ಸ್ವಲ್ಪ ದುಬಾರಿ ವೆಚ್ಚವಾಗುತ್ತದೆ. Low level causeway ಕಟ್ಟಿದರೆ ಹಣ ಸ್ವಲ್ಪ ಕಡಿಮೆಯಾಗುತ್ತದೆ, ಬೇಗ ಕೆಲಸ ಮಾಡಿಸಬಹುದು. ಆದರೆ, ಯಾವುದು ಅನುಕೂಲ ಮತ್ತು ಯಾವುದು ಅನಾನುಕೂಲವೆಂಬುದನ್ನು. ಇದರ ಮ್ಯಾಪ್ (ನಕ್ಷೆ) ಎಲ್ಲವನ್ನೂ ತರಿಸಿಕೊಂಡು, ಮಾನ್ಯ ಸದಸ್ಯರೊಡನೆ ಚರ್ಚೆ ಮಾಡಿ, ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದಾಗ್ಯೂ ಅಗತ್ಯವಿರುವ ಒಂದೆರಡು ಕಡೆಗಳಲ್ಲಿ low level causeway ಮಾಡಿದರೆ ಅನುಕೂಲವೆಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದ್ದರೆ ಆದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—೧೯೮೧-೮೨ನೇ ಸಾಲಿನ ಆಯವ್ಯಯ ಪತ್ರದಲ್ಲಿ ಈ ಕಾಮಗಾರಿಗಳನ್ನು ಸೇರಿಸಲಾಗಿದೆ ಎಂದು ಹೇಳಲಾಗಿದ್ದರೂ, ಆಚ್ಚಾಗಿರುವ ಪ್ರಶ್ನೋತ್ತರ ಪತ್ರದಲ್ಲಿ ''ಸೇರಿಸಿಲ್ಲ'' ಎಂದು ಮಾನ್ಯ ಸಚಿವರು ಹೇಳಿದ್ದಾರೆ. ೧೯೮೧-೮೨ನೇ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಕಾಮಗಾರಿಗಳನ್ನು ಸೇರಿಸಬೇಕೆಂದು ನಮ್ಮ ಅಭಿಪ್ರಾಯ ಕೇಳಿ ಕಳುಹಿಸಿದ ಸುತ್ತೋಲೆ ಪ್ರಕಾರ ನಾನು ಕಲ್ಲಹಳ್ಳಿ, ಹಲಸಂಗಿ ಮತ್ತು ಸಿರಕನಹಳ್ಳಿ ಸೇತುವೆಗಳನ್ನು ಆದ್ಯತೆ ಮೇರೆಗೆ ನಿರ್ಮಿಸಬೇಕೆಂದು ಮಾನ್ಯ ಸಚಿವರಿಗೆ ಹೇಳಿದ್ದೇನೆ. ಆದಂದರಿಂದ, ೧೯೮೧-೮೨ರ ಸಪ್ಲಿಮೆಂಟರಿ ಆಯವ್ಯಯದಲ್ಲಾದರೂ ಇದನ್ನು ಸೇರಿಸುವಿರಾ?

ಶ್ರೀ ಕಾಗೋಡು ತಿಮ್ಮಪ್ಪ.—೧೯೮೧-೮೨ರಲ್ಲಿ ಹೊಸ ಕಾರ್ಯಕ್ರಮ ಮಾಡಿದ್ದೇವೆ, ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಪಡೆದಿದ್ದೇವೆ. ತಮ್ಮ ಕ್ಷೇತ್ರದಲ್ಲಿ ಆಗಬೇಕಾಗಿರುವ ಕಾಮಗಾರಿಗಳ ಬಗೆ ಮಾನ್ಯ ಸದಸ್ಯರು ಯಾವು ಯಾವುದನ್ನು ಕೊಟ್ಟಿದಾದ್ದಾರೆಂಬುದನ್ನು ತೆಗೆದು ನೋಡುತ್ತೇನೆ. ಮತ್ತು ಮಾನ್ಯ ಸದಸ್ಯರ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಅದನ್ನು ಕಾರ್ಯಗತ ಮಾಡುವುದಕ್ಕೆ ಖಂಡಿತ ಪ್ರಯತ್ನ ಮಾಡುತ್ತೇನೆ.

Interland Water Transport in D.K. District

(270) SRI A. G. KODGI (Baindur).—Will the Minister of State for Fisheries and Ports be pleased to state.—

(a) whether there is any proposal to develop interland water transport system in Dakshina Kannada District.

(b) if so, the progress achieved so far in this regard?

SRI D. B. Pawar (Minister of State for Fisheries and Ports).—

(a) Yes).

(b) 1. Departmental operation has been introduced at two ferries with mechanised boats.